# KANNADA
## Paper – II

ಗಮನಿಸಿ : ಈ ಪತ್ರಿಕೆಯು ನೂರು (100) ವಸ್ತುನಿಷ್ಠ ಮಾದರಿಯ ಪ್ರಶ್ನೆಯನ್ನೊಳಗೊಂಡಿದ್ದು ಪ್ರತಿಯೊಂದು ಪ್ರಶ್ನೆಯೂ ಎರಡು (2) ಅಂಕಗಳನ್ನು ಹೊಂದಿದೆ. ಎಲ್ಲಾ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು.

1. ಎರಡನೆಯ ನಾಗವರ್ಮನ 'ವರ್ಧಮಾನಪುರಾಣ'ವನ್ನು ಮೊದಲಿಗೆ ಶೋಧಿಸಿ ಸಂಪಾದಿಸಿದವರು

(A) ದೇ.ಜ.ಗೌ.

(B) ಹಾ.ಮಾ.ನಾ.

(C) ಡಿ.ಎಲ್.ಎನ್.

(D) ಬಿ. ಎಸ್. ಸಣ್ಣಯ್ಯ

2. 'ಸುಖಿಂಬಡು' – ಈ ಸಮಾಸಕ್ಕೆ ಉದಾಹರಣೆ

(A) ಬಹುವ್ರೀಹಿ ಸಮಾಸ

(B) ಕ್ರಿಯಾ ಸಮಾಸ

(C) ತತ್ಪುರುಷ ಸಮಾಸ

(D) ಕರ್ಮಧಾರಯ ಸಮಾಸ

3. ಬಸವರಾಜ ಕಟ್ಟೀಮನಿಯವರಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ತಂದು ಕೊಟ್ಟ ಕೃತಿ

(A) ಜರತಾರಿ ಜಗದ್ಗುರು

(B) ಜ್ವಾಲಾಮುಖಿಯ ಮೇಲೆ

(C) ಮೋಹದ ಬಲೆಯಲ್ಲಿ

(D) ಬಲೆಯ ಬೀಸಿದರು

4. 'ಅಟ್ಟಮತ'ವು ಒಳಗೊಂಡಿರುವ ವಿಷಯ

(A) ವಾಸ್ತು ಶಾಸ್ತ್ರ

(B) ಮದನ ಶಾಸ್ತ್ರ

(C) ಶಕುನ ಶಾಸ್ತ್ರ

(D) ಮಳೆ ಶಾಸ್ತ್ರ

5. ವಾಮನನ ಪ್ರಕಾರ ನಿತ್ಯಾಲಂಕಾರಗಳು

(A) ಅರ್ಥಾಲಂಕಾರಗಳು

(B) ಶಬ್ದಾಲಂಕಾರ

(C) ಗುಣಗಳು

(D) ಭೂಷಣಗಳು

6. 'ಸೊಬಗಿನ ಸುಗ್ಗಿ'ಯೆಂಬ ಪರ್ಯಾಯ ಹೆಸರಿರುವ ಕಾವ್ಯ

(A) ಕಬ್ಬಿಗರ ಕಾವ

(B) ಸುಕುಮಾರ ಚರಿತ

(C) ಸೊಬಗಿನ ಸೋನೆ

(D) ಅಭಿನವ ದಶಕುಮಾರ ಚರಿತೆ



ಈಗಾಗಲೇ 1,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿರುವ
SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.

7. 'ಮದನತಿಲಕ' – ಈ ಕೃತಿಯ ಕರ್ತೃವಾದ ಚಂದ್ರರಾಜನ ಆಶ್ರಯದಾತ

(A) ಚಾಲುಕ್ಯ ತೈಲಪ

(B) ಚಾಲುಕ್ಯ ಜಯಸಿಂಹ

(C) ಚಾಲುಕ್ಯ ಆಹವಮಲ್ಲ

(D) ಚಾಲುಕ್ಯ ಜಗದೇಕಮಲ್ಲ

8. ತಮಿಳು ಕಾವ್ಯಮೀಮಾಂಸೆಗೆ ಸಂಬಂಧಿಸಿದ 'ಅಹಂ – ಪುರಂ' ನ ವಿವೇಚನೆಯಿರುವ ಪ್ರಾಚೀನ ತಮಿಳು ಕೃತಿ

(A) ತಿರುಕ್ಕುರುಳ್

(B) ಮಣಿಮೇಕಲೈ

(C) ತೊಲ್ ಕಾಪ್ಪಿಯಂ

(D) ಎಟ್ಟುತ್ತೊಗೈ

9. ಗಿರೀಶ ಕಾರ್ನಾಡರು ರಚಿಸಿರುವ ಕೊನೆಯ ನಾಟಕ

(A) ರಾಕ್ಷಸ ತಂಗಡಗಿ

(B) ಮದುವೆಯ ಆಲ್ಬಂ

(C) ಒಡಕಲು ಬಿಂಬ

(D) ಅಂಜು ಮಲ್ಲಿಗೆ

10. 'ವಡಿ' – ಪರಿಕಲ್ಪನೆಯನ್ನು ಮೊದಲಬಾರಿಗೆ ಪ್ರಸ್ತಾಪಿಸಿದ ಕೃತಿ

(A) ಕವಿರಾಜ ಮಾರ್ಗ

(B) ಕವಿಜಿಹ್ವಾ ಬಂಧನ

(C) ಶಬ್ದಮಣಿದರ್ಪಣ

(D) ಛಂದೋಂಬುಧಿ

11. ಮಂಗಳೂರು ಕೇಂದ್ರದಲ್ಲಿ ಕಾವ್ಯ ಕೃಷಿ ಮಾಡಿದ ಸಾಹಿತ್ಯ ಸಂಘ

(A) ಗೆಳೆಯರ ಗುಂಪು

(B) ಮಿತ್ರ ಕೂಟ

(C) ಮಿತ್ರ ಮಂಡಲಿ

(D) ಕನ್ನಡ ಸಂಘ

12. 'ತಾಯಿ ರಕ್ಕಸಿಯಾದಂತೆ ಕಾಯವಿಕಾರವು' – ಇಲ್ಲಿರುವ ಅಲಂಕಾರ

(A) ರೂಪಕ

(B) ದೀಪಕ

(C) ಉತ್ಪ್ರೇಕ್ಷೆ

(D) ಉಪಮೆ

13. 'ಕ್ರಮದೆ' – ಇಲ್ಲಿರುವ ವಿಭಕ್ತಿ ಪ್ರತ್ಯಯ

(A) ದ್ವಿತೀಯ

(B) ತೃತೀಯ

(C) ಚತುರ್ಥಿ

(D) ಪಂಚಮಿ

14. 'ಪತ್ತಳಿಕೆಯೆನಲು ಕಾಗದಮಕ್ಕು ದೌತಿ ಮಸಿಪಾತ್ರೆಯಕ್ಕು ಕಲಾಮು – ಲೇಖನಿಯಕ್ಕು' – ಎಂದು ಹೇಳಿದ ಕವಿ

(A) ಪಂಪ

(B) ಅಭಿನವ ಮಂಗರಾಜ

(C) ಅಭಿನವ ಪಂಪ

(D) ಮಂಗರಸ

15. 'ಮೌನವನ್ನು ಮಾತಾಡಿಸುವ ಮೌನಗಳನ್ನು ಆಲಿಸುವ ವಿಮರ್ಶೆ'

(A) ರಚನಾವಾದಿ ವಿಮರ್ಶೆ

(B) ನಿರಚನವಾದಿ ವಿಮರ್ಶೆ

(C) ಚಿರಂತನ ಪ್ರತೀಕ ವಿಮರ್ಶೆ

(D) ಮನೋವೈಜ್ಞಾನಿಕ ವಿಮರ್ಶೆ

16. ಆಲೂರು ವೆಂಕಟರಾಯರ ನಂತರ 'ಜಯಕರ್ನಾಟಕ' ಪತ್ರಿಕೆಯನ್ನು ಮುನ್ನಡೆಸಿದವರು

(A) ಶ್ಯಾಮಲಾದೇವಿ ಬೆಳಗಾಂವಕರ

(B) ಕೊಡಗಿನ ಗೌರಮ್ಮ

(C) ಆರ್. ಕಲ್ಯಾಣಮ್ಮ

(D) ಬೆಳಗೆರೆ ಜಾನಕಮ್ಮ

17. ದುರುಗ ಮುರುಗಿಯವರ ಸಂಸ್ಕೃತಿ – ಈ ಕೃತಿಯ ಕರ್ತೃ

(A) ವಿಜಯಾ ದಬ್ಬೆ

(B) ಗೀತಾನಾಗಭೂಷಣ

(C) ಶೈಲಜಾ ಉಡಚಣ

(D) ಹೆಚ್. ನಾಗವೇಣಿ

18. ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು ಬಯಕೆ ಬರುವುದರ ಕಣ್ಣನ್ನೆ ಕಾಣೊ – ಈ ಸಾಲುಗಳ ಕರ್ತೃ

(A) ಬೆಟಗೇರಿ ಕೃಷ್ಣಶರ್ಮ

(B) ಸಿದ್ದಯ್ಯ ಪುರಾಣಿಕ

(C) ಮಧುರ ಚೆನ್ನ

(D) ಅಂಬಿಕಾತನಯದತ್ತ

19. 'ಜಿನ ಚರಣ ನಖಾದರ್ಶಂ ವಿನತಾಮರರಾಜ ರಾಜವದನ ಪ್ರತಿಮಂ' ಎನ್ನುವ ಸ್ತುತಿ ಇರುವ ಕಾವ್ಯ

(A) ವಿಕ್ರಮಾರ್ಜುನ ವಿಜಯಂ

(B) ಕವಿರಾಜಮಾರ್ಗ

(C) ಆದಿಪುರಾಣ

(D) ಧರ್ಮಾಮೃತ

20. ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ' ಕಾವ್ಯಕ್ಕೆ ಮೂಲ ಆಕರ

(A) ವಸುಭಾಗಭಟ್ಟನ 'ಪಂಚತಂತ್ರ'

(B) ಬಾಣನ 'ಕಾದಂಬರಿ'

(C) ಭಾರವಿಯ 'ಕಿರಾತಾರ್ಜುನೀಯ'

(D) ವಿಷ್ಣುಶರ್ಮನ 'ಪಂಚತಂತ್ರ'

**ಬಹು ಆಯ್ಕೆ ಮಾದರಿ ಪ್ರಶ್ನೆಗಳು**

21. ಇವು ಸಾಂಗತ್ಯ ಕಾವ್ಯಗಳು.

a. ಅಂಜನಾ ಚರಿತೆ, ರಾಮನಾಥ ಚರಿತೆ

b. ಅನಂತನಾಥ ಚರಿತೆ, ವೀರೇಶ ಚರಿತೆ

c. ಅಮುಗಿದೇವ ಸಾಂಗತ್ಯ, ನಳಚರಿತೆ

d. ಚಂದ್ರಹಾಸನ ಕಥೆ, ಉದ್ದಾಳೀಕನ ಕಥೆ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು d

(C) a ಮತ್ತು c

(D) a ಮತ್ತು d

22. ಇವು ಸರಿಯಾದ ಹೊಂದಾಣಿಕೆ.

a. ಕಾವ್ಯ ಸಮೀಕ್ಷೆ – ತೀ. ನಂ. ಶ್ರೀಕಂಠಯ್ಯ

b. ಪೀಠಿಕೆಗಳು ಲೇಖನಗಳು – ಬಿ. ಎಂ. ಶ್ರೀಕಂಠಯ್ಯ

c. ಸಂಕ್ಷಿಪ್ತ ಕನ್ನಡ ಛಂದಸ್ಸು – ಡಿ. ಎಸ್. ಕರ್ಕಿ

d. ಪ್ರಪಂಚ ಪಾಣಿಪತ್ತು – ಕೈಲಾಸಂ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು c

(D) a ಮತ್ತು d

23. ಇವು ಸರಿಯಾದ ಹೊಂದಾಣಿಕೆಯಲ್ಲ.

a. ಅಪ್ಪಯ್ಯ ದೀಕ್ಷಿತ – ಕುವಲಯಾನಂದ

b. ಜಗನ್ನಾಥ – ಚಿತ್ರಮೀಮಾಂಸಾ ಖಂಡನ

c. ಮಮ್ಮಟ – ಕಾವ್ಯಾಲಂಕಾರ

d. ರುದ್ರಭಟ್ಟ – ರಸಗಂಗಾಧರ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು d

24. ಇವು ಷಟ್ಪದಿ ಕಾವ್ಯಗಳು

a. ಹರಿಭಕ್ತಿಸಾರ, ವೀರೇಶ ಚರಿತೆ

b. ತೊರವೆ ರಾಮಾಯಣ, ಕುಮಾರ ಕಾಳಗ ಕಥೆ

c. ಕುಮುದೇಂದು ರಾಮಾಯಣ, ಜಯನೃಪಕಾವ್ಯ

d. ಸಮ್ಯಕ್ತ್ವ ಕೌಮುದಿ, ಚಂದ್ರನಾಥ ಚರಿತೆ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು c

(D) c ಮತ್ತು d

25. ವ್ಯಾಧನೊಂದು ಮೊಲನ ತಂದರೆ ಸಲುವ ಹಾಗ್ಗೆ ಬಿಲಿವರಯ್ಯಾ ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬರಿಲ್ಲ – ಈ ಸಾಲುಗಳಲ್ಲಿ ಬಳಕೆಯಾಗಿರುವ ನಾಣ್ಯಗಳು

a. ಬಿಲಿವ

b. ಹಾಗ

c. ಸಲುವ

d. ಅಡಕೆ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು c

(D) b ಮತ್ತು d

26. ನಿರಚನ ವಾದವು

a. ಖಚಿತ ಅರ್ಥದ ಅನಿಶ್ಚಯತೆಯನ್ನು ಮನಗಾಣಿಸುತ್ತದೆ.

b. ಅರ್ಥವನ್ನು ಖಚಿತಪಡಿಸುತ್ತದೆ.

c. ಕೇಂದ್ರವನ್ನು ಮುಖ್ಯವೆಂದು ಭಾವಿಸುತ್ತದೆ.

d. ಅಂಗೀಕೃತ ಶ್ರೇಣಿಯನ್ನು ಪಲ್ಲಟಗೊಳಿಸುತ್ತದೆ.

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು c

(D) a ಮತ್ತು d

27. ಇವು ಚೆನ್ನಣ್ಣ ವಾಲೀಕಾರರ ಕೃತಿಗಳು

a. ಕಪ್ಪು ಕಡಲು

b. ಕಪ್ಪು ಕಥೆಗಳು

c. ಕತ್ತಾಲ ದಾರಿ ದೂರ

d. ಕುತ್ತದಲ್ಲಿ ಕುದ್ದವರ ಕಥೆಗಳು.

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

28. ಹೊಂದಾಣಿಕೆಯಾಗುವ ಜೋಡಿಗಳು

a. ಚಂಪಕಮಾಲೆ - ಉತ್ಪಲಮಾಲೆ

b. ಸ್ರಗ್ಧರಾ - ಮಹಾಸ್ರಗ್ಧರಾ

c. ಶಾರ್ದೂಲ ವಿಕ್ರೀಡಿತ - ಎಡೆಯಕ್ಕರ

d. ಮತ್ತೇಭ ವಿಕ್ರೀಡಿತ - ಪಿರಿಯಕ್ಕರ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು d

29. ಇವುಗಳಲ್ಲಿ ಯಾವವು ಹೊಂದಾಣಿಕೆಯಲ್ಲ ?

a. ಸರಸ್ವತಿಯ ಭಂಡಾರದ ಮುದ್ರೆಯನೊಡೆದ - ಪಂಪ

b. ಕವಿತಾಗುಣಾರ್ಣವ - ರನ್ನ

c. ಉಭಯ ಕವಿ ಚಕ್ರವರ್ತಿ - ಪೊನ್ನ

d. ಭಾರತೀ ಚಿತ್ತಚೋರ - ನೇಮಿಚಂದ್ರ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

30. ಧ್ವನ್ಯಂಗಗಳಲ್ಲಿ ಇವುಗಳನ್ನು ಸ್ಥಾನಗಳೆಂದು ಗುರುತಿಸುವರು.

a. ಮೇಲ್ತುಟಿ

b. ಕೆಳ ತುಟಿ

c. ಮೇಲ್ದಂತ

d. ಜಿಹ್ವಾಗ್ರ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) b ಮತ್ತು d

(D) a ಮತ್ತು c

31. ಭಾಷಾಂತರ ಸ್ವೀಕರಣಕ್ಕೆ ಇವು ಉದಾಹರಣೆಗಳು

a. ವೃತ್ತ ಪತ್ರಿಕೆ, ಬೆಂಕಿಪೊಟ್ಟಣ

b. ಬಿಸ್ಕತ್ತು, ಬಸ್ಸು

c. ಆಟಂಬಾಂಬು, ಅಣೆಕಟ್ಟು

d. ಗಣಕಯಂತ್ರ, ದೂರದರ್ಶನ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು d

(D) b ಮತ್ತು d

32. ಇವುಗಳಲ್ಲಿ ಯಾವ ಹೊಂದಾಣಿಕೆಗಳು ಸರಿಯಲ್ಲ ?

a. ಬಗೆಬಗೆದು ಕೇಳ್ದು
ಬುಧರೊಲವೊಗೆದಿರೆ
ಹೃದಯದೊಳೆ ತಾಳ್ದ ಮಣಿ
ಹಾರಂಬೋಲ್ – ಕವಿರಾಜಮಾರ್ಗ

b. ಸಾಧಿಸುವೆಂ ಫಲ್ಗುಣನಂ
ಸಾಧಿಸುವೆಂ
ಪವನಸುತನ ಬಸಿಱಿಂ
ಹಾಂ ಕರ್ಣ – ಗದಾಯುದ್ಧ

c. ಶಿವಸುಖಮನಱಿಯದೀ
ಮಾನವ
ಸುಖದ ನಿಮಿತ್ತದಿ
ತಪಂಗೆಯ್ವರೊ – ಆದಿಪುರಾಣ

d. ಸಿಡಿಲೆಂಬ ಜವನ ಕೊಡಲಿಯ
ಕಡುವೊಯ್ಲಿಂ ನೆಗೆದ
ಬೇರ್ಗಳೊಡನೆ ನೆಲಂ – ಶಾಂತಿಪುರಾಣ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು d

33. ಸರಿಯಾದ ಜೋಡಿಗಳನ್ನು ಗುರುತಿಸಿ.

a. ಜಿ. ಎಚ್. ನಾಯಕ – ವಿಮರ್ಶೆಯ ವಿನಯ

b. ಕೀರ್ತಿನಾಥ ಕುರ್ತಕೋಟಿ – ವಿನಯ ವಿಮರ್ಶೆ

c. ರಹಮತ್ ತರೀಕೆರೆ – ಧರ್ಮಪರೀಕ್ಷೆ

d. ಡಿ. ಆರ್. ನಾಗರಾಜ – ನಾಗಾರ್ಜುನ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

34. ಸರಿಯಾದ ಜೋಡಿಗಳನ್ನು ಗುರುತಿಸಿ.

a. ತೇಲಿಸೋ ಇಲ್ಲ
ಮುಳುಗಿಸೋ – ವಾದಿರಾಜರು

b. ಇಷ್ಟು ದಿನ ಈ ವೈಕುಂಠ
ಎಷ್ಟು ದೂರ ಎನುತಲಿದ್ದೆ – ಕನಕದಾಸರು

c. ತಾಳುವಿಕೆಗಿಂತ ತಪವು ಇಲ್ಲ – ಪುರಂದರದಾಸರು

d. ನಕ್ಷತ್ರ ಮಂಡಲವೆ ಲಕ್ಷ
ದೀಪಾವಳಿಯು – ಜಗನ್ನಾಥದಾಸರು

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

35. ಇವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿ.

a. ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು – ಚೆನ್ನಬಸವಣ್ಣ

b. ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ – ಅಲ್ಲಮಪ್ರಭು

c. ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ – ಅಕ್ಕಮಹಾದೇವಿ

d. ತನುಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು – ಸಿದ್ಧರಾಮ

ಸರಿಯಾದ ಉತ್ತರ :

(A) a ಮತ್ತು b

(B) a ಮತ್ತು c

(C) b ಮತ್ತು c

(D) b ಮತ್ತು d

36. ಇವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿ :

a. ಮೇಲೆ ನೋಡೆ ಕಣ್ಣ ತಣಿಪ ನೀಲಪಟದಿ ವಿವಿಧ ರೂಪ – ಕುವೆಂಪು

b. ಹರಿದ್ವತ್ತಹರಿಯ ಚಿತ್ತ ಈ ಧೀರನಡೆಮತ್ತ – ಪು.ತಿ.ನ.

c. ಕೋಗಿಲೆ ಹಾಡಿತು ಹುಳ ಅಳೆಯಿತು – ಎ. ಕೆ. ರಾಮಾನುಜನ್

d. ತಾಯಂತೆ ? ತ್ಲಾಯಂತೆ ! ಮಂಕರಾಭಾವುಕರು – ಡಿ.ವಿ.ಜಿ.

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

37. ಶ್ರೀರಂಗರ ನಾಟಕಗಳು

a. ಉದರ ವೈರಾಗ್ಯ, ಹರಿಜನ್ವಾರ

b. ಟೊಳ್ಳು ಗಟ್ಟಿ, ಬಹಿಷ್ಕಾರ

c. ಕೇಳು ಜನಮೇಜಯ, ಕತ್ತಲೆ ಬೆಳಕು

d. ಸತ್ತವನ ಸಂತಾಪ, ಗಂಡಸ್ಕತ್ರಿ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು c

38. ಇವು ನಿರಂಜನರ ಕಥಾಸಂಕಲನಗಳು

a. ಕಾಮನ ಬಿಲ್ಲು

b. ರಕ್ತ ಸರೋವರ

c. ಪವಾಡ ಪುರುಷ

d. ಸಂಧಿಕಾಲ

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) b ಮತ್ತು d

(D) c ಮತ್ತು d

39. ಸರಿಯಾದ ಜೋಡಿ ಗುರುತಿಸಿ.

a. ಮಹಾರಾಷ್ಟ್ರದ ಕನ್ನಡ ಶಾಸನಗಳು – ಎಂ. ಎಂ. ಕಲಬುರ್ಗಿ

b. ಶಾಸನಗಳಲ್ಲಿ ಸಂಗೀತ ವಿಚಾರ – ಎಂ. ಚಿದಾನಂದಮೂರ್ತಿ

c. ಕರ್ನಾಟಕದ ಲಾಕುಳ ಶೈವರ ಇತಿಹಾಸ – ಶಂ. ಬಾ. ಜೋಶಿ

d. ಋಗ್ವೇದ ಸಾರಃ ನಾಗಪ್ರತಿಮಾ ವಿಚಾರ – ಕಪಟರಾಳ ಕೃಷ್ಣರಾವ್

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

40. ಇವು ನಿರ್ದೇಶಕ ಸರ್ವನಾಮಗಳು

a. ಅಲ್ಲಿ, ಇಲ್ಲಿ

b. ನಾನ್, ನಾಂ

c. ಈತ, ಊಕೆ

d. ಆವನ್, ಆವಳ್

ಸರಿಯಾದ ಉತ್ತರ :

(A) a ಮತ್ತು b

(B) b ಮತ್ತು c

(C) a ಮತ್ತು c

(D) c ಮತ್ತು d

ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ. ಈ ಕೆಳಗಿನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

**(41ನೇ ಪ್ರಶ್ನೆಯಿಂದ 45ನೇ ಪ್ರಶ್ನೆಯವರೆಗೆ)**

ಮದಗಜಸಂಕುಳದಿಂ ಶ್ವಾ –
ಪದದಿಂದಂ ಗಿರಿಗುಹಾಳಿಯಿಂದಧಿಕ ಭಯ –
ಪ್ರದಮೆನಿಪ ಘೋರಕಾಂತಾ-
ರದೊಳೆ ಮಹಾಭೀರುವೆಂಬ ಜಂಬುಕನಿರ್ಕುಂ

ಆ ಜಂಬುಕನೊಂದು ದಿವಸಂ ಆಹಾರ ವಿಹಾರಕಾಂಕ್ಷೆಯಿಂದಡವಿಯೆಲ್ಲಮಂ ತೊಳಲ್ದು ಎಲ್ಲಿಯುಮೇನುಮಂ ಪಡೆಯದೆ ತನಗೆ ಸಹಾಯನಪ್ಪುದೊಂದು ವಾಯಸನಿರ್ದಲ್ಲಿಗೆ ಬರ್ಪುದು ಮಾ ವಾಯಸಂ ಇದಿರ್ವಂದು, ಎಲೆ ಭಾವ, ಏಂ ಬಡವಾದಿರೆನೆ ಪಲವು ದಿವಸಮಾಹಾರಂಬಡೆಯದೆ ಬಡವಾಗಿ ನಿನ್ನಲ್ಲಿ ಆಸೆಪಟ್ಟು ಬಂದೆನೆಂಬುದುಂ, ಇದಾವ ಗಹನಮೀಗಳಾಂ ಪೋಗಿ ಬರ್ಪನ್ನೆವರ ಮಿಲ್ಲಿಯೇ ನಿಲ್ಲಿಮೆಂದು ವಾಯುವೇಗದಿಂ ವಾಯಸಂ ಪೋಗಿ ಬಂದು, ಈ ತೋರ್ಪ ನದಿಯ ತೀರದೊಳ್ ಚತುರ್ಬಲಯುತರಿರ್ವರರಸುಗಳ್ ಕಾದಿದಲ್ಲಿ ಪೆಣಮಯಮಾಗಿರ್ದರಣಭೂಮಿಯಂ

ಕಂಡೆಂ, ನಿನ್ನೊಡಲ ಬಡತನಂ

ಕಿಡುವಿನಮಾಹಾರಕ್ಕೆಡೆಯಾದುದಲ್ಲಿಗೆ ಪೋಗೆಂದು

ಪೇಳ್ವುದುಮಾ ನರಿ ಪರಿದು ಸಮರರಂಗಭೂಮಿಯನೆಯ್ದಿ

ಅನೇಕ ಶಬಾಳೋಕನ ಜಾತಹರ್ಷನಾಗಿರ್ಪುದುಂ,

ಕಿಱಿದಾನುಂ ಬೇಗಕ್ಕೆ ಭೋಂಕನೆ ಪೊಣ್ಮಿದ

ಭಯಂಕರಧ್ವಾನಮಂ ಕೇಳ್ದಲ್ಲಿಯುಂ ನಿಲಲಣ್ಮದೆ

ಓಡಿಬರ್ಪುದುಂ, ಲಂಬಕರ್ಣನೆಂಬುದೊಂದು

ಜಂಬುಕಂ ಕಂಡಿದೇನೆಲೆ ಭಾವಾ! ನೀನೇತರ್ಕೆ

ಭಯಾತುರನಾಗಿ ಬರ್ಪೆ, ಎನೆ, ಕೊಳುಗುಳಂ

ನಿರ್ಮಾನುಷ್ಯಗೋಚರವೆಂದು ಬಗೆದು

ಪೋಪನ್ನೆಗಂ, ನೆಲಂ ಮೊಱಗಿದಂತಪ್ಪುದೊಂದು

ಭಯಂಕರಧ್ವಾನವಾಗಲದಂ ಕೇಳ್ದೋಡಿ

ಬಂದೆನೆಂಬುದುಂ, ಆ ಜಂಬುಕನೆಂದುದು; ಆ

ಧ್ವಾನಮಾವುದೆಂದುಮಱಿಯದೆ ದೂರಭೀರುವಾಗಿ

ಪೋಗಲ್ವೇಡ, ಆಯೆಡೆಯನೆನಗೆ ತೋಱು ಬಾ,

ಎಂದೊಡಂಗೊಂಡು ಬಂದು ನೋಡುವನ್ನೆಗಂ,

ಶಿಖರಿ ಶಿಖರಾನುಕಾರಿಯಪ್ಪುದೊಂದು ಭೇರಿ

ಸಮೀರಣಪ್ರೇರಿತ ಭೂರುಹಶಾಖಾಗ್ರಹತಿಯಿಂದತಿ

ಪ್ರಘೋಷಂಗೆಯ್ದು ತದಾಹತಿಯಿಲ್ಲದಾಗಳ್

ನಿಶ್ಶಬ್ದಮಾಗಿಯುಂ ಇರ್ಕುಮದಂ ಕಂಡಾ

ಜಂಬುಕಂ ಮನುಷ್ಯಸಂಚಾರಮಿಲ್ಲದುದಂ

ನಿಶ್ಚಯಮಾಗಱಿದಾರಯ್ದು ಬಲವಂದು ನಿಂದು

ನೋಡಿ ಮತ್ತಲ್ಲಿಯೇನಾನುಮಿರ್ಕುಮೆಂದು ಶಂಕೆಯಿಂ

ಭೇರಿಯ ಕಣ್ಣಂ ವಿದಾರಿಸಿಯದಱೊಳೇನುಮಂ

ಕಾಣದೆ ಲಂಬಕರ್ಣಂ ಆ ನರಿ ದೂರಭೀರುವಾದುದರ್ಕೆ

ಹಾಸ್ಯಂಗೆಯ್ದುದು.

41. ಘನಘೋರ ಅಡವಿಯಲ್ಲಿದ್ದ ನರಿಯ ಹೆಸರೇನು ?

(A) ಶ್ವಾಪದ

(B) ಕಾಂತಾರ

(C) ಜಂಬುಕ

(D) ಮಹಾಭೀರು

42. ನರಿಯು ಸೊರಗಿದುದಕ್ಕೆ ಕಾರಣ

(A) ಅನೇಕ ದಿನಗಳಿಂದ ಆಹಾರ ಸಿಗದಿರುವುದು

(B) ಯಾರು ಜೊತೆಗಾರರು ಇಲ್ಲದಿರುವುದು

(C) ಅಡವಿಯಲ್ಲಿ ವಿಹಾರಕ್ಕಾಗಿ ಅಲೆದಾಡಿದಿರುವುದು

(D) ಬಿರುಬಿಸಿಲಿನ ಬೇಗೆಯಿದ್ದುದರಿಂದ

43. ಕಾಗೆ ನರಿಗೆ ಯಾವ ರೀತಿ ಸಹಾಯ ಮಾಡಿತು ?

(A) ಹಣ್ಣು ತುಂಬಿದ ಮರದ ದಾರಿ ತೋರಿಸಿ

(B) ಹೆಣಮಯವಾದ ರಣರಂಗ ತೋರಿಸಿ

(C) ಕಬ್ಬಿನ ತೋಟವನ್ನು ತೋರಿಸಿ

(D) ಕೋಳಿಗಳಿರುವ ಎಡೆಯನ್ನು ತೋರಿಸಿ

44. ಭಯಂಕರ ಧ್ವನಿಯು ಹೊರಟದ್ದು ಎಲ್ಲಿಂದ ?

(A) ಭೂಮಿಯಿಂದ

(B) ಆಕಾಶದಿಂದ

(C) ಕಾಡುಮೃಗಗಳಿಂದ

(D) ರಣಭೇರಿಯಿಂದ

45. 'ಹಾಸ್ಯಂಗೆಯ್ದುದು' – ಈ ಪದವನ್ನು ಬಿಡಿಸುವ ಸರಿಯಾದ ಕ್ರಮ

(A) ಹಾಸ್ಯಮಂ + ಗೆಯ್ದುದು

(B) ಹಾಸ್ಯಂ + ಗೆಯ್ದುದು

(C) ಹಾಸ್ಯಮಂ + ಕೆಯ್ದುದು

(D) ಹಾಸ್ಯಂ + ಕೆಯ್ದುದು

46. ಈ ಕೆಳಗಿನವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಅಭಿನವಗುಪ್ತ – ಕಾವ್ಯಕೌತುಕ ವಿವರಣ

(B) ಮಮ್ಮಟ – ಕಾವ್ಯಾಲಂಕಾರ

(C) ಸಾಳ್ವ – ರಸಗಂಗಾಧರ

(D) ತಿರುಮಲಾರ್ಯ – ನರಪತಿ ಚರಿತ

47. ಕೆಳಗಿನವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಬಾಬುರಾಯ – ವಾಗ್ದೇವಿ

(B) ಎಂ. ಎಸ್. ಪುಟ್ಟಣ್ಣ – ಕುಣಿಗಲ್ ರಾಮಾಶಾಸ್ತ್ರಿ

(C) ಡಿ. ವಿ. ಗುಂಡಪ್ಪ – ಸಾಲಾರ್ ಜಂಗ್‌ನ ಚರಿತ್ರೆ

(D) ಗುಲ್ವಾಡಿ ವೆಂಕಟರಾಯ – ಇಂದಿರಾ

48. ಈ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ?

(A) ಎಳೆ – ಅನುಪಮಾ ನಿರಂಜನ

(B) ಸಾಹಿತ್ಯರತ್ನ – ನಿರಂಜನ

(C) ಜಾರುವ ದಾರಿಯಲ್ಲಿ – ಅ.ನ.ಕೃ.

(D) ಅನಾಥೆ – ಬಸವರಾಜ ಕಟ್ಟೀಮನಿ

49. ಈ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಕೊಳಲು, ಕೃತ್ತಿಕೆ

(B) ನವಿಲು, ಪಕ್ಷಿಕಾಶಿ

(C) ಪ್ರೇಮಕಾಶ್ಮೀರ, ವಿಭೂತಿಪೂಜೆ

(D) ಷೋಡಶಿ, ಜೇನಾಗುವಾ

50. ಈ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಚೆನ್ನಬಸವ ನಾಯಕ – ಮಲ್ಲಿಗೆ

(B) ಕಾನೂರು ಸುಬ್ಬಮ್ಮ – ಚಿನ್ನಮ್ಮ

(C) ಮುಂಜಾವಿನಿಂದ ಮುಂಜಾವಿಗೆ – ನೀಲಾ

(D) ಜೀವನಯಾತ್ರೆ – ಭಾಗ್ಯಮ್ಮ

51. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಶ್ರೀಪಾದರಾಯ – ಸಾಳುವ ನರಸಿಂಹ

(B) ನಂಜುಂಡ – ಕೃಷ್ಣದೇವರಾಯ

(C) ಚಾಟು ವಿಠಲನಾಥ – ಹೊಯ್ಸಳ ನರಸಿಂಹ

(D) ನಾಗಚಂದ್ರ- ಚಾಲುಕ್ಯ ಜಗದೇಕಮಲ್ಲ

52. ಈ ಕೆಳಗಿನವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಹಲ್ಮಿಡಿಶಾಸನ – ಒಡ್ಡಲಿ

(B) ಬಾದಾಮಿಶಾಸನ – ಕೋಳಾಹಳ್ಳಿ

(C) ತಮಟ ಕಲ್ಲು ಶಾಸನ – ಪ್ರಣಯಿ ಜನಕ್ಕೆ

(D) ಜಿನವಲ್ಲಭನ ಶಾಸನ – ಗುಣಮಣಿಗಣಂಬುಲ್

53. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ರಾಜಗೃಹದೊಳ್ – ಅಗ್ನಿಭೂತಿ

(B) ಕೌಶಾಂಬಿ – ಸೂರ್ಯಮಿತ್ರ

(C) ಚಂಪಾನಗರದೊಳ್ – ಕೇಶಿ

(D) ಉಜ್ಜೇನಿ – ನಾಗಶ್ರೀ

54. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?

(A) ಕೆಳತುಟಿ ಮೇಲ್ತುಟಿ – ಪ್

(B) ಕೆಳತುಟಿ ಮೇಲ್ದಂತ – ಬ್

(C) ಜಿಹ್ವಾಗ್ರ -ಮೇಲ್ದಂತ – ತ್

(D) ಜಿಹ್ವಾಮೂಲ - ಮೃದು ತಾಲು -ಕ್

55. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(A) ನೆಲಸಮ – ಕಥಾ ಸಂಕಲನ

(B) ಕಾಡಿನ ಕತ್ತಲಲ್ಲಿ – ಕವನ ಸಂಕಲನ

(C) ವಿಕಟ ವಿಜಯ – ಕಾದಂಬರಿ

(D) ಅವಧ – ನಾಟಕ

56. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಶೂರನೀತನೆ ಪಂಡಿತನೀತನೆ – ಕವಿರಾಜಮಾರ್ಗ

(B) ಜನಮಂಗೀಕರಿಪುದು ನೆಟ್ಟನೆ – ಶಬ್ದಮಣಿದರ್ಪಣ

(C) ಪರಮಜಿನೇಂದ್ರವಾಣಿಯೆ ಸರಸ್ವತಿ ಬೇರದು ಪೆಣ್ಣರೂಪಮಂ – ಶಾಂತಿ ಪುರಾಣ

(D) ಸತಿಯ ಪತಿವ್ರತಾ ಗುಣಸಮೃದ್ಧಿಗೆ ದರ್ಶನ ಶುದ್ಧಿಗಟ್ಟಿಕೆಂ – ರಾಮಚರಿತ ಪುರಾಣಂ

57. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(A) 1 ಬ್ರ 3ವಿ 1ರು – ಅಕ್ಕರ

(B) 2 ವಿ 1ಬ್ರ 2ವಿ1 ಬ್ರ – ಪಿರಿಯಕ್ಕರ

(C) 1ಬ್ರ 2ವಿ 1ರು – ಎಡೆಯಕ್ಕರ

(D) 2ವಿ 1ರು – ದೊರೆಯಕ್ಕರ

58. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?

(A) ದಕ್ಷಿಣ ದ್ರಾವಿಡ – ತಮಿಳು, ಮಲೆಯಾಳ, ಕನ್ನಡ

(B) ಮಧ್ಯದ್ರಾವಿಡ – ಕೊಲಾಮಿ, ನಾಯ್ಕಿ, ಪರ್ಜಿ

(C) ಉತ್ತರ ದ್ರಾವಿಡ – ಕುರುಖ್, ಮಾಲ್ಟೊ, ಧಾಂಗರ್

(D) ಮೂಲ ಮಧ್ಯದ್ರಾವಿಡ – ಬ್ರಾಹೂಈ, ಕುರುಖ್, ಮಾಲ್ಟೊ

59. ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಗಣಸಹಸ್ರನಾಮ – ಚೆನ್ನಬಸವಣ್ಣ

(B) ಮಿಶ್ರಾರ್ಪಣ – ಅಲ್ಲಮಪ್ರಭು

(C) ಮಂತ್ರಗೋಪ್ಯ – ಸಿದ್ಧರಾಮ

(D) ಸೃಷ್ಟಿಯ ವಚನ – ಅಕ್ಕಮಹಾದೇವಿ

60. ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಕುಸುಮಬಾಲೆ – ಮಲ್ಲಾಜಮ್ಮ

(B) ಮಾಗಿ – ಮಾಳಿ

(C) ಕರುಳಿನ ಕರೆ – ಪಾರ್ವತಿ

(D) ಸಮರಸವೇ ಜೀವನ – ಪದ್ಮಾವತಿ

61. ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) A Grammar of the Oldest Kanarese Inscriptions – ಎ. ಎನ್. ನರಸಿಂಹಯ್ಯ

(B) A Descriptive Grammar of the Pampa Bharatha – ಕಿಟೆಲ್

(C) The Structure of Kannada – ಮ್ಯಾಕ್ಸ್‌ಮುಲ್ಲರ್

(D) A Comparative Grammar of Dravidian Languages – ಬಿ. ಎಲ್. ರೈಸ್

62. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಶರಣರ ಅನುಭಾವ ಸಾಹಿತ್ಯ – ಎಚ್. ತಿಪ್ಪೇರುದ್ರಸ್ವಾಮಿ

(B) ಸಿದ್ಧರಾಮನ ನಿಜವಚನಗಳು – ಎಲ್. ಬಸವರಾಜು

(C) ಶರಣ ಚರಿತಾಮೃತ – ಸಿದ್ಧಯ್ಯ ಪುರಾಣಿಕ

(D) ಶರಣರ ಚರಿತ್ರೆ – ಆರ್. ಸಿ. ಹಿರೇಮಠ

63. ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಶ್ರೀಪಾದರಾಯ – ಪುರಂದರವಿಠಲ

(B) ಪುರಂದರದಾಸರು – ವಿಜಯವಿಠಲ

(C) ವಾದಿರಾಜ – ಹಯವದನ

(D) ವಿಜಯದಾಸರು – ರಂಗವಿಠಲ

64. ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಜೇಡರ ದಾಸಿಮಯ್ಯ – ಮುದನೂರು

(B) ಅಲ್ಲಮಪ್ರಭು – ಬಳ್ಳಿಗಾವೆ

(C) ಮಹಾದೇವಿಯಕ್ಕ – ಸೊನ್ನಲಿಗೆ

(D) ಸಿದ್ಧರಾಮ – ಸೊಲ್ಲಾಪುರ

65. Herculean Task – ಇದರ ಕನ್ನಡ ರೂಪ

(A) ಭಗೀರಥ ಪ್ರಯತ್ನ

(B) ಬೆಟ್ಟಕ್ಕೆ ಕಲ್ಲು ಹೊರು

(C) ಬೆಟ್ಟ ಅಗೆದು ಇಲಿ ಹಿಡಿ

(D) ಬೆಟ್ಟ ಸುತ್ತಿ ಮೈಲಾರಕ್ಕೆ ಹೋಗು

66. ಬಹು ಆಯ್ಕೆಯ ಜೋಡಣೆಯ ಮಾದರಿ :

| | |
|---|---|
| a. ನಾಗವರ್ಮಾಚಾರ್ಯ | I. ಅಪರಾಜಿತೇಶ್ವರ ಶತಕ |
| b. ಹರಿಹರ | II. ಸೋಮೇಶ್ವರ ಶತಕ |
| c. ತಿರುಮಲಾರ್ಯ | III. ಚಂದ್ರಚೂಡಾಮಣಿ ಶತಕ |
| d. ರತ್ನಾಕರವರ್ಣಿ | IV. ರಕ್ಷಾ ಶತಕ |
| | V. ನೀತಿ ಶತಕ |

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | III | I | IV | II |
| (B) | IV | II | III | I |
| (C) | III | IV | II | I |
| (D) | III | II | I | IV |

67. a. Vindication of Rights of Women — I. ವರ್ಜಿನಿಯ ವುಲ್ಫ
b. A Room of One's Own — II. ಮೇರಿವುಲ್‌ಸ್ಟನ್ ಕ್ರಾಫ್ಟ್
c. Feminine Mystique — III. ಕೇಟ್ ಮಿಲೆಟ್
d. The Dialectic of Sex — IV. ಶುಲಾಮಿಟ್ ಫೈರ್ ಸ್ಟೋನ್
V. ಬೆಟ ಫ್ರೆಡನ್

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | I | V | IV |
| (B) | I | II | III | IV |
| (C) | V | IV | III | II |
| (D) | III | II | V | I |

68. a. ಗ್ರಾಮಾಯಣ — I. ಡಾಲಿ
b. ಮೈಮನಗಳ ಸುಳಿಯಲ್ಲಿ — II. ದೊರೆ
c. ಮುಕ್ತಿ — III. ಶೇಷಪ್ಪ
d. ಬೇಲಿಯ ಹೂಗಳು — IV. ಮಂಜುಳೆ
V. ನಾರಣಪ್ಪ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | III | IV | V |
| (B) | III | IV | I | II |
| (C) | V | III | I | II |
| (D) | I | II | III | IV |

69. a. ಸಾಲದ ಮಗು — I. ಮೊಗಳ್ಳಿ ಗಣೇಶ್
b. ಶವದ ಮನೆ — II. ಯು. ಆರ್. ಅನಂತಮೂರ್ತಿ
c. ಕ್ಲಿಪ್ ಜಾಯಿಂಟ್ — III. ಚದುರಂಗ
d. ಮಾರಿಕೊಂಡವರು — IV. ಕುವೆಂಪು
V. ದೇವನೂರು ಮಹಾದೇವ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | I | II | IV | V |
| (B) | II | III | V | I |
| (C) | IV | III | II | V |
| (D) | III | I | IV | V |

70. a. ಈಶ್ವರ ಕವಿ — I. ಛಂದೋನುಶಾಸನ
b. ಗುಣಚಂದ್ರ — II. ಛಂದಃ ಸೂತ್ರಗಳು
c. ಪಿಂಗಲ — III. ವೃತ್ತ ಜಾತಿ ಸಮುಚ್ಚಯ
d. ಹೇಮಚಂದ್ರ — IV. ಕವಿ ಜಿಹ್ವಾಬಂಧನ
V. ಛಂದಸ್ಸಾರ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | I | II | III | IV |
| (B) | IV | V | II | I |
| (C) | V | IV | II | I |
| (D) | II | I | III | V |

71. ಹೊಂದಿಸಿ ಬರೆಯಿರಿ :

a. ಅಪ್ಪಯ್ಯ ದೀಕ್ಷಿತ — I. ಶೃಂಗಾರ ಪ್ರಕಾಶ

b. ಆನಂದವರ್ಧನ — II. ಧ್ವನ್ಯಾಲೋಕಲೋಚನ

c. ಅಭಿನವಗುಪ್ತ — III. ಧ್ವನ್ಯಾಲೋಕ.

d. ಕ್ಷೇಮೇಂದ್ರ — IV. ಚಿತ್ರಾಮೀಮಾಂಸೆ

V. ಕವಿಕಂಠಾಭರಣ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | I | IV | III |
| (B) | IV | III | II | V |
| (C) | IV | III | I | II |
| (D) | III | IV | II | V |

72. ವ್ಯಾಕರಣ ಅಂಶಗಳನ್ನು ಹೊಂದಿಸಿ ಬರೆಯಿರಿ :

a. ಪ್ರಥಮ ಪುರುಷ ಬಹುವಚನ — I. ಆಪ್ಪೋರ್

b. ಪ್ರಥಮಾವಿಭಕ್ತಿ ಬಹುವಚನ — II. ಸ್ವರ್ಗಾಗ್ರಮಾನ್

c. ಷಷ್ಠೀ ಪ್ರತ್ಯಯದ ದೀರ್ಘತೆ — III. ಆಕಳ್.

d. ದ್ವಿತೀಯ ವಿಭಕ್ತಿ ಪ್ರತ್ಯಯ — IV. ಹವನಾಹವದುಳ್

V. ಮಂಗಲೀಸನಾ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | III | II | V | I |
| (B) | III | I | V | IV |
| (C) | I | III | II | V |
| (D) | III | I | V | II |

73. ಹೊಂದಿಸಿ ಬರೆಯಿರಿ :

a. ನನ್ನನ್ನು ನಾನೇ ಕಂಡೆ — I. ಎ. ಎನ್. ಮೂರ್ತಿರಾಯರು

b. ನನ್ನ ಭಯಾಗ್ರಫಿ — II. ಅ. ನ. ಕೃ.

c. ಸೂಜಿಗಣ್ಣಿನ ಹಿನ್ನೋಟ — III. ರಂ. ಶ್ರೀ. ಮುಗಳಿ

d. ಜೀವನ ರಸಿಕ — IV. ಬೀchi

V. ನಿರಂಜನ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | IV | I | III |
| (B) | II | V | IV | I |
| (C) | III | IV | V | II |
| (D) | I | II | III | IV |

74. ಹೊಂದಿಸಿ ಬರೆಯಿರಿ :

a. ಜಗದ ಜಾತ್ರೆಯಲಿ — I. ನಾಟಕ

b. ಕಾದಂಬರಿ - ಸಾಮಾನ್ಯ ಮನುಷ್ಯ — II. ವಿಮರ್ಶೆ

c. ಆಕಾಂಕ್ಷೆ ಮತ್ತು ಆಸ್ತಿ — III. ಕಥಾಸಂಕಲನ

d. ಬೆಳಕಿನ ದೂತರು — IV. ಅನುವಾದ

V. ಮಕ್ಕಳ ಸಾಹಿತ್ಯ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | I | II | V | III |
| (B) | III | II | I | V |
| (C) | V | IV | II | I |
| (D) | III | V | I | IV |

75. ಹೊಂದಿಸಿ ಬರೆಯಿರಿ :

a. ಕಥನ ಕವನ — I. ಬಸವರಾಜ ನಾಯ್ಕರ್

b. ಅಸಂಗತ — II. ಕೆ. ಎಲ್. ಗೋಪಾಲ ಕೃಷ್ಣಯ್ಯ

c. ಪುರಾಣ — III. ಜಿ. ಎಸ್. ಆಮೂರ

d. ಕಾಮಿಡಿ — IV. ಎಚ್. ಎಸ್. ವೆಂಕಟೇಶ ಮೂರ್ತಿ

V. ಸಿ. ಎನ್. ರಾಮಚಂದ್ರನ್

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | IV | I | II | III |
| (B) | I | III | II | V |
| (C) | V | IV | III | I |
| (D) | II | III | V | IV |

76. ಹೊಂದಿಸಿ ಬರೆಯಿರಿ :

a. ಚಂದನ — I. ಬಿ. ಎಂ. ಶ್ರೀ.

b. ಸವಿನೆನಪು — II. ಕೆ. ಎಸ್. ನರಸಿಂಹಸ್ವಾಮಿ

c. ನಾಗವಲ್ಲಿ — III. ಫ. ಗು. ಹಳಕಟ್ಟಿ

d. ಮಣಿಹ — IV. ಎಚ್. ಎಲ್. ನಾಗೇಗೌಡರು

V. ಟಿ. ಎಸ್. ವೆಂಕಣ್ಣಯ್ಯ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | V | III | II | I |
| (B) | I | III | II | V |
| (C) | II | V | IV | III |
| (D) | II | V | III | IV |

77. ಹೊಂದಿಸಿ ಬರೆಯಿರಿ :

a. ಎಲ್. ಬಸವರಾಜು — I. ಶಿವತತ್ವ ಚಿಂತಾಮಣಿ

b. ಆರ್. ಸಿ. ಹಿರೇಮಠ — II. ಶಿವಯೋಗ ಪ್ರದೀಪಿಕಾ

c. ಎಚ್. ತಿಪ್ಪೇರುದ್ರ ಸ್ವಾಮಿ — III. ಶಿವದಾಸ ಗೀತಾಂಜಲಿ

d. ಎಂ. ಎಂ. ಕಲಬುರಗಿ — IV. ಶಿವಕವಿ ಷಡಕ್ಷರಿ

V. ಪದ್ಮರಾಜ ಪುರಾಣ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | III | IV | V |
| (B) | III | IV | V | I |
| (C) | IV | V | I | II |
| (D) | III | V | IV | II |

78. ಹೊಂದಿಸಿ ಬರೆಯಿರಿ :

a. ಎಂ. ಆರ್. ಕಮಲ — I. ಬೆಳ್ಳಿಯ ಸಂಕೋಲೆಗಳು

b. ಎಂ. ಎಸ್. ಆಶಾದೇವಿ — II. ಉತ್ತರ ನಕ್ಷತ್ರ

c. ಎಚ್. ಎಸ್. ಶ್ರೀಮತಿ — III. ನದೀ ದೀಪಗಳು

d. ವೈದೇಹಿ — IV. ದೋಪ್ದಿ ಮತ್ತು ಇತರ ಕಥೆಗಳು

V. ಉರಿಚಮ್ಮಾಳಿಗೆ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | V | IV | I |
| (B) | II | I | III | IV |
| (C) | V | II | IV | III |
| (D) | I | III | V | IV |

79. ಹೊಂದಿಸಿ ಬರೆಯಿರಿ :

a. ಯತಿಯೆಂಬುದು ಗಣ ನಿಯಮ — I. ಪಿಂಗಳ

b. ಯತಿಯೆಂಬುದು ಸಿದ್ಧಾಂತಂ — II. ನಾಗವರ್ಮ

c. ವಾಗ್ವಿರಾಮೋಯತಿಃ — III. ಹೇಮಚಂದ್ರ

d. ಶ್ರವ್ಯೋವಿರಾಮೋಯತಿಃ — IV. ಜಯಕೀರ್ತಿ

V. ಕವಿರಾಜಮಾರ್ಗ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | V | III | IV | II |
| (B) | II | IV | III | I |
| (C) | II | V | IV | III |
| (D) | III | II | I | IV |

80. ಹೊಂದಿಸಿ ಬರೆಯಿರಿ :

a. Culture and Anarchy — I. ಎಫ್. ಡಿ. ಸಸ್ಸೂರ

b. Of Grammatology — II. ಟಿ.ಎಸ್. ಎಲಿಯಟ್

c. Course in General Linguistics — III. ನೋಮ್ ಚಾಮ್‌ಸ್ಕಿ

d. Meta Physical Poets — IV. ಮ್ಯಾಥ್ಯೂ ಆರ್ನಾಲ್ಡ್

V. ಡೆರಿಡಾ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | IV | V | I | II |
| (B) | III | II | IV | I |
| (C) | II | I | III | IV |
| (D) | I | III | IV | V |

81. ಹೊಂದಿಸಿ ಬರೆಯಿರಿ :

a. ಕರ್ತೃಕೇಂದ್ರಿತ ವಿಮರ್ಶೆ — I. ಚಾರಿತ್ರಿಕ ವಿಮರ್ಶೆ

b. ಸಮಾಜಕೇಂದ್ರಿತ ವಿಮರ್ಶೆ — II. ಪ್ರಕಾರ ವಿಮರ್ಶೆ

c. ಕೃತಿಕೇಂದ್ರಿತ ವಿಮರ್ಶೆ — III. ಸಾಂಸ್ಕೃತಿಕ ವಿಮರ್ಶೆ

d. ವಾಚಕಕೇಂದ್ರಿತ ವಿಮರ್ಶೆ — IV. ತೌಲನಿಕ ವಿಮರ್ಶೆ

V. ಮನೋವೈಜ್ಞಾನಿಕ ವಿಮರ್ಶೆ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | I | II | III | V |
| (B) | IV | III | I | II |
| (C) | V | I | II | III |
| (D) | V | I | III | IV |

82. ಹೊಂದಿಸಿ ಬರೆಯಿರಿ :

a. ಶಬ್ದವ್ಯಾಪಾರ ವಿಚಾರ — I. ೨ನೇ ನಾಗವರ್ಮ

b. ಸಾಹಿತ್ಯ ದರ್ಪಣ — II. ರುದ್ರಟ

c. ಅಭಿದಾನ ವಸ್ತುಕೋಶ — III. ಮಮ್ಮಟ

d. ಕಾವ್ಯಾಲಂಕಾರ — IV. ಹೇಮಚಂದ್ರ

V. ವಿಶ್ವನಾಥ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | III | V | I | II |
| (B) | II | III | IV | I |
| (C) | III | I | IV | II |
| (D) | V | IV | II | III |

83. ಹೊಂದಿಸಿ ಬರೆಯಿರಿ :

a. ಶಿವಕೋಟ್ಯಾಚಾರ್ಯ — I. ಕಿರಾತಾರ್ಜುನೀಯ ಟೀಕೆ
b. ದುರ್ವಿನೀತ — II. ಚೂಡಾಮಣಿ
c. ಶ್ಯಾಮಕುಂದಾಚಾರ್ಯ — III. ಶ್ರಾವಕಾಚಾರಸಾರ
d. ತುಂಬಲೂರಾಚಾರ್ಯ — IV. ಕನ್ನಡ ಪ್ರಭೃತ
V. ವಡ್ಡಾರಾಧನೆ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | III | V | IV |
| (B) | I | II | III | V |
| (C) | III | II | I | IV |
| (D) | V | I | IV | II |

84. ಹೊಂದಿಸಿ ಬರೆಯಿರಿ :

a. ಸೋಮಶೇಖರ ಇಮ್ರಾಪುರ — I. ಜಗ್ಗಿಬಿದ್ವಾ ಜಂಬು ನೀರಲ ಹಣ್ಣು
b. ಪಿ. ಕೆ. ರಾಜಶೇಖರ — II. ಕಾಡುಗೊಲ್ಲರ ಸಂಸ್ಕೃತಿ
c. ಮೈಲಹಳ್ಳಿ ರೇವಣ್ಣ — III. ಪಿರಿಯಾಪಟಣದ ಕಾಳಗ
d. ತೀ. ನಂ. ಶಂಕರ ನಾರಾಯಣ — IV. ಸಾವಿರದ ಒಗಟುಗಳು
V. ಮೊಹರಂ ಪದಗಳು

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | V | III | IV | I |
| (B) | I | II | IV | III |
| (C) | IV | III | I | II |
| (D) | II | IV | III | I |

85. ಹೊಂದಿಸಿ ಬರೆಯಿರಿ :

a. ಗೊಗ್ಗವ್ವೆ — I. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ
b. ಘಟ್ಟಿವಾಳಯ್ಯ — II. ನಾಸ್ತಿನಾಥ
c. ಬೊಂತಾದೇವಿ — III. ನಿಃಕಳಂಕ ಮಲ್ಲಿಕಾರ್ಜುನ
d. ಮೋಳಿಗೆಯ ಮಾರಯ್ಯ — IV. ಕಲಿದೇವರ ದೇವಾ
V. ಬಿಡಾಡಿ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | II | III | IV | V |
| (B) | V | IV | II | I |
| (C) | II | I | V | III |
| (D) | IV | III | II | I |

ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :

86. ಹೇಳಿಕೆ : ಹೆಣ್ಣನು ಹೊನ್ನನು ಹಣ್ಣಾದ ಮರವನು ಕಣ್ಣಲಿ ಕಂಡು ಮನದಲಿ ಬಯಸದ ಅಣ್ಣಗಳದಾರು.

ವಿವರಣೆ : ಹೆಣ್ಣನ್ನು ಹೊನ್ನನು ಹಣ್ಣನ್ನು ಈ ಮೂರನ್ನು ಕಣ್ಣಲ್ಲಿ ಕಂಡು ಮನಸ್ಸಿನಲ್ಲಿ ಬಯಸದೆ ಅಣ್ಣಂದಿರು ಇರಲಾರರು.

(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

87. ಹೇಳಿಕೆ : ಎನಿತುಂ ಕಾಯ್ದು ಬೆನ್ನೀರ್ ಮನೆ ಸುಡದೆಂಬಂತೆ

ವಿವರಣೆ : ನೀರು ಎಷ್ಟೇ ಕಾಯ್ದು ಬಿಸಿಯಾದರೂ ಮನೆ ಸುಡಲು ಸಾಧ್ಯವಿಲ್ಲ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ಸರಿ

88. ಹೇಳಿಕೆ : ಕೋಟಿ ರವಿ ಶಶಿಗಳಿಗೆ ಮೀಟಾದ ಪ್ರಭೆ ಬಂದು ನಾಟಿತು ನನ್ನ ಮನದೊಳಗೆ.

ವಿವರಣೆ : ಕೋಟ್ಯಂತರ ಸೂರ್ಯಚಂದ್ರರ ಬೆಳಕು ನನ್ನೊಳಗೆ ಇದೆ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

89. ಹೇಳಿಕೆ : "ನಾ ಕರಿಯಳೆಂದು ನೀ ಜರಿಯ ಬೇಡ ಬಿಳಿ ಗೆಳತಿ ಗರ್ವದಿಂದ ! ಕಪ್ಪಿಗಿಂತ ಬಿಳಿ ಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ ."

ವಿವರಣೆ : ಕಪ್ಪು ಬಣ್ಣಕ್ಕಿಂತ ಬಿಳಿಯ ಬಣ್ಣ ಶ್ರೇಷ್ಠವೆಂದು ಹೆಮ್ಮೆಯಿಂದ ಹೇಳಬಹುದು.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

90. ಹೇಳಿಕೆ : "ನೋಡುವದೊಂದಕ್ಕರಮದು ಮಾಡುವೊಡೆ ಉಚ್ಚರಣೆಗೞಿದು ಕೂಡೆ ವಿಚಾರಿಸಲೇಡದಱಿಂ ೞಿ ಕುೞಕ್ಷೞಂಗಳನಿದರೊಳ್"

ವಿವರಣೆ : ನೋಡುವುದಕ್ಕೆ ಒಂದೇ ಅಕ್ಷರದಂತೆ ಕಂಡರೂ ಉಚ್ಚಾರಣೆಯಲ್ಲಿ ರಳ ಕುಳ ಕ್ಷಳ ಎಂದು ಮೂರು ತೆರನಾಗಿರುತ್ತದೆ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

91. ಹೇಳಿಕೆ : ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

ವಿವರಣೆ : ಸೋಮಾರಿಯಾದವನಿಗೆ ಎಷ್ಟು ಐಶ್ವರ್ಯವಿದ್ದರೂ ಸಾಲುವುದಿಲ್ಲ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

92. ಹೇಳಿಕೆ : ಬಡತನಕೆ ಉಂಬುವ ಚಿಂತೆ ಉಣಲಾರದೆ ಇಡುವ ಚಿಂತೆ.

ವಿವರಣೆ: ಬಡತನವಿದ್ದಾಗ ಊಟ ಸಿಕ್ಕರೆ ಸಾಕು ಎನ್ನುವ ಸ್ಥಿತಿ. ಊಟದ ಚಿಂತೆ ತೊಲಗಿದ ಮೇಲೆ ಉಡುವುದಕ್ಕೇನು ಎಂಬ ಚಿಂತೆ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

ಈಗಾಗಲೇ 1,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿರುವ
SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.



**93.** ಹೇಳಿಕೆ : "ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ."

ವಿವರಣೆ : ಹಳ್ಳಿಗಳು, ಹೊಲಗಳು ಹೂ ತುಂಬಿದ ಕೊಳಗಳು ಅಲ್ಲಿಂದ ಬೀಸುವ ಮಂದಗಾಳಿಯಿಂದ ಕನ್ನಡ ನಾಡು ಚೆಲುವಾಯಿತು.

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ

**94.** ಹೇಳಿಕೆ : ಸಿಂಗದ ಮುಪ್ಪಂ ನೆಗಟ್ದೇ ಗಾಂಗೇಯರ ಮುಪ್ಪು ಮಿಳಿಕೆವಡೆಗುಮೆ ?

ವಿವರಣೆ : ಸಿಂಹಕ್ಕೆ ವಯಸ್ಸಾಗಿ ಮುಪ್ಪಾಗಿದೆಯೆಂದು ಅಲಕ್ಷಿಸಲುಸಾಧ್ಯವೇ? ಹಾಗೆಯೇ ಭೀಷ್ಮರಿಗೆ ವಯಸ್ಸಾಗಿದೆ ಎಂದ ಮಾತ್ರಕ್ಕೆ ಅವರನ್ನು ಅಲಕ್ಷಿಸುವುದುಂಟೇ ?

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ , ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

**95.** ಹೇಳಿಕೆ : "ಗಿಡಗಂಟೆಯಾ ಕೊರಳೊಳಗಿಂದ ಹಕ್ಕಿಗಳಾ

ಹಾಡು

ಹೊರಟಿತು ಹಕ್ಕಿಗಳಾ ಹಾಡು ಗಂಧರ್ವರಾ

ಸೀಮೆಯಾಯಿತು ಕಾಡಿನಾ ನಾಡು."

ವಿವರಣೆ : ಗಿಡ ಮರಗಳ ಕೊರಳಿನಿಂದಲೇ ಹೊರಟಂತೆ ಹಕ್ಕಿಗಳ ಹಾಡು ಹೊರಟಿತು. ಹಕ್ಕಿಗಳ ಹಾಡಿನಿಂದ ಕಾಡು ಗಂಧರ್ವರ ಸೀಮೆಯಂತಾಯಿತು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**ಕಾಲಾನುಕ್ರಮಣಿಕೆ ಮಾದರಿ ಪ್ರಶ್ನೆಗಳು.**

**96.** (A) ನಯಸೇನ, ನಾಗಚಂದ್ರ, ಅಗ್ಗಳ, ಶಾಂತಿನಾಥ

(B) ಅಗ್ಗಳ, ನಯಸೇನ, ನಾಗಚಂದ್ರ, ಶಾಂತಿನಾಥ

(C) ನಾಗಚಂದ್ರ, ಅಗ್ಗಳ, ನಯಸೇನ, ಶಾಂತಿನಾಥ

(D) ಶಾಂತಿನಾಥ, ನಾಗಚಂದ್ರ, ನಯಸೇನ, ಅಗ್ಗಳ

97. (A) ತ್ರಿಪುರ ದಹನ ಸಾಂಗತ್ಯ, ಸೊಬಗಿನ ಸೋನೆ, ಕುಮಾರ ರಾಮನ ಸಾಂಗತ್ಯ, ಜೀವಂಧರ ಸಾಂಗತ್ಯ

(B) ಜೀವಂಧರ ಸಾಂಗತ್ಯ, ತ್ರಿಪುರ ದಹನ ಸಾಂಗತ್ಯ, ಸೊಬಗಿನ ಸೋನೆ, ಕುಮಾರ ರಾಮನ ಸಾಂಗತ್ಯ

(C) ಸೊಬಗಿನ ಸೋನೆ, ಜೀವಂಧರ ಸಾಂಗತ್ಯ, ತ್ರಿಪುರ ದಹನ ಸಾಂಗತ್ಯ, ಕುಮಾರ ರಾಮನ ಸಾಂಗತ್ಯ

(D) ಕುಮಾರ ರಾಮನ ಸಾಂಗತ್ಯ, ಸೊಬಗಿನ ಸೋನೆ, ತ್ರಿಪುರ ದಹನ ಸಾಂಗತ್ಯ, ಜೀವಂಧರ ಸಾಂಗತ್ಯ

98. (A) ಜೀವಂಧರ ಚರಿತೆ, ಪ್ರಭುಲಿಂಗಲೀಲೆ, ನಾಗಕುಮಾರ ಚರಿತೆ, ಸನತ್ಕುಮಾರ ಚರಿತೆ

(B) ನಾಗಕುಮಾರ ಚರಿತೆ, ಸನತ್ಕುಮಾರ ಚರಿತೆ, ಪ್ರಭುಲಿಂಗಲೀಲೆ, ಜೀವಂಧರ ಚರಿತೆ

(C) ಜೀವಂಧರ ಚರಿತೆ, ನಾಗಕುಮಾರ ಚರಿತೆ, ಸನತ್ಕುಮಾರ ಚರಿತೆ, ಪ್ರಭುಲಿಂಗಲೀಲೆ

(D) ಪ್ರಭುಲಿಂಗಲೀಲೆ, ಸನತ್ಕುಮಾರ ಚರಿತೆ, ಜೀವಂಧರ ಚರಿತೆ, ನಾಗಕುಮಾರ ಚರಿತೆ

99. (A) ನನ್ನ ಗೋಪಾಲ, ಜಲಗಾರ, ಮೋಡಣ್ಣನ ತಮ್ಮ, ಯಮನ ಸೋಲು

(B) ಮೋಡಣ್ಣನ ತಮ್ಮ, ಯಮನ ಸೋಲು, ಜಲಗಾರ, ನನ್ನ ಗೋಪಾಲ

(C) ಯಮನ ಸೋಲು, ಜಲಗಾರ, ನನ್ನ ಗೋಪಾಲ, ಮೋಡಣ್ಣನ ತಮ್ಮ

(D) ಜಲಗಾರ, ನನ್ನ ಗೋಪಾಲ, ಮೋಡಣ್ಣನ ತಮ್ಮ, ಯಮನ ಸೋಲು

100. (A) ತಾವರೆಯ ಹೂ, ಸಪ್ತವರ್ಣದ ಸ್ವಪ್ನ, ಮಾಪುರ ತಾಯಿಯ ಮಕ್ಕಳು, ಮಹಾಮನೆ

(B) ಸಪ್ತವರ್ಣದ ಸ್ವಪ್ನ, ಮಾಪುರ ತಾಯಿಯ ಮಕ್ಕಳು, ಮಹಾಮನೆ, ತಾವರೆಯ ಹೂ

(C) ತಾವರೆಯ ಹೂ, ಮಹಾಮನೆ, ಸಪ್ತವರ್ಣದ ಸ್ವಪ್ನ, ಮಾಪುರ ತಾಯಿಯ ಮಕ್ಕಳು

(D) ಮಹಾಮನೆ, ಮಾಪುರ ತಾಯಿಯ ಮಕ್ಕಳು, ಸಪ್ತವರ್ಣದ ಸ್ವಪ್ನ, ತಾವರೆಯ ಹೂ

---

ಈಗಾಗಲೇ 1,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿರುವ
SR WORLD ಟೆಲಿಗ್ರಾಂ ಗ್ರೂಪ್ ಗೆ ನೀವು Join ಆಗಿ,
ಲಿಂಕ್ ಗಾಗಿ 9538781570ಗೆ ವಾಟ್ಸಾಪ್ ಮಾಡಿ.